

# ಹಾರಿತು ದೂರ ದೂರ...

ಬಸವಳಿದು ಸಿಕ್ಕ ಹಸುರು ಪಾರಿವಾಳ

**ಹಾರಲು ಕಲಿಯುವ ಸಂದರ್ಭದಲ್ಲಿ ಕೆಳಗೆ ಬಿದ್ದಿದ್ದ ಹಸುರು ಪಾರಿವಾಳವನ್ನು ರಕ್ಷಿಸಿದ ಈ ಕಥನ, ಜೀವಕೊಂಡಿಗಳು ದುರ್ಬಲಗೊಳ್ಳುತ್ತಿರುವ, ಪ್ರಕೃತಿಯ ಚಕ್ರದಲ್ಲಿ ಏರುಪೇರುಗಳಾಗಿರುವ ದುರಂತವನ್ನು ಸಹೃದಯರ ಗಮನಕ್ಕೆ ತರುವ ವಿಶೇಷ ಬರಹ.**

**ಅಖಿಲೇಶ್ ಚಿಪ್ಪಳಿ**



ಹೊಸ ಅಮ್ಮನ ಪಾಲನೆಯಲ್ಲಿ ಆತಿಥೇಯ ಹಕ್ಕಿ

ಅಗಣಿತ ಸಂಖ್ಯೆಗಳ ಮೆಸೇಜುಗಳ ಕಿಣಿಕಿಣಿಗಳಿಂದ ಕಿರಿಕಿರಿಯಾಗುತ್ತದೆಂದು, ರಿಂಗ್ ಟೋನೊಂದನ್ನು ಬಿಟ್ಟು ಉಳಿದೆಲ್ಲವನ್ನು ನಿಶ್ಶಬ್ದ ಮಾಡಿಟ್ಟಿದ್ದೆ. ಒಮ್ಮೆ ವಾಟ್ಸ್‌ಆ್ಯಪ್ ಮೆಸೇಜುಗಳ ಮೇಲೆ ಕಣ್ಣು ಹಾಯಿಸಿದಾಗ ಪರಿಚಿತರೊಬ್ಬರು ಕಳುಹಿಸಿದ ಹಕ್ಕಿ ಮರಿಯ ಚಿತ್ರ ಗಮನಸೆಳೆಯಿತು. ಅಂದರೆ, ಆ ಹಕ್ಕಿಮರಿಗೆ ಏನೋ ತೊಂದರೆಯಾಗಿದೆ ಎಂದೇ ಅರ್ಥ. ಆಗಾಗ ಕೆಲವರು ಈ ಬಗೆಯ ಚಿತ್ರಗಳನ್ನು ಕಳುಹಿಸಿ, ನೀರುಕಾಗೆ, ಕುಕ್ಕ, ಗೂಬೆ, ಹಾರುಬೆಕ್ಕು, ಕಬ್ಬೆಕ್ಕು ಇವುಗಳಿಗೆ ತೊಂದರೆಯಾಗಿದೆ, ಏನಾದರೂ ಮಾಡಿ ಎನ್ನುವ ಮಾನವೀಯ ಹಾಗೂ ಕಳಕಳಿಯ ಬೇಡಿಕೆಯಿಡುವುದು ಮಾಮೂಲು.

ರಣಬಿಸಿಲಿನ ಆ ದಿನದಂದು ಜನರು ತಂಪು ಪಾನೀಯಗಳನ್ನು, ಐಸ್ ಕ್ರೀಂಗಳನ್ನು ಸವಿಯಲು ಆ ಪುಟ್ಟ ಐಸ್ ಕ್ರೀಂ ಅಂಗಡಿಯಲ್ಲಿ ಕಿಕ್ಕಿರಿದು ನೆರೆದಿದ್ದರು. ಮೂಲೆಯಲ್ಲಿ ದಿನಪತ್ರಿಕೆ ಹಾಸಿ ಹಕ್ಕಿಮರಿ ತಪ್ಪಿಸಿಕೊಳ್ಳದಂತೆ ಬುಟ್ಟಿಯೊಂದನ್ನು ಕವುಚಿಟ್ಟಿದ್ದರು. ಪಕ್ಷಿತಜ್ಞರಿಗೆ ಫೋಟೊ ಕಳುಹಿಸಿ, ಅದರ ಮಾಹಿತಿ ಪಡೆದ ನಂತರವೇ ಅದರ ಶುಶ್ರೂಷೆ ಸಾಧ್ಯ. ಯಾವುದೇ ಹಕ್ಕಿಯ ಇತ್ಯೋಪರಿ ಗೊತ್ತಿಲ್ಲದೆ ಅದನ್ನು ನಿರ್ವಹಣೆ ಮಾಡುವುದು ಖುದ್ದು ಹಕ್ಕಿಮರಿಗೆ ಅಪಾಯ ತಂದೊಡ್ಡಬಹುದು. ಮೂವತ್ತು ವರ್ಷಗಳ ಹಿಂದೆ ವಿದ್ಯುತ್ ಶಾಕ್ ತಗುಲಿದ ಗೂಬೆಯೊಂದಕ್ಕೆ ಬಾಳೆಹಣ್ಣು ಇಟ್ಟು ತಿನ್ನಿಸುವ ಪ್ರಯತ್ನ ಮಾಡಿದ್ದು; ಗೂಬೆ ಬಾಳೆಹಣ್ಣನ್ನು ಮೂಸಿಯೂ ನೋಡದೆ, ತಿರಸ್ಕರಿಸಿದ್ದು ನೆನಪಿನಲ್ಲಿತ್ತು.

ಐಸ್ ಕ್ರೀಂ ಅಂಗಡಿಯಲ್ಲಿ ರಕ್ಷಣೆಗೊಳಗಾದ ಪಕ್ಷಿ, ಪಶ್ಚಿಮಘಟ್ಟಗಳ ಕಾಡುಗಳಲ್ಲಿ ಕಂಡುಬರುವ ಹಸುರು ಪಾರಿವಾಳದ ಮರಿಯಾಗಿತ್ತು. ಹಾರಲು ಕಲಿಯುವಾಗ ಅಪಾಯಕ್ಕೆ ಸಿಲುಕಿ ಕೆಳಗೆ ಬಿದ್ದಿತ್ತು. ಬಹಳ ಪೆಟ್ಟೇನೂ ಆಗಿರಲಿಲ್ಲ. ರಟ್ಟಿನ ಪೆಟ್ಟಿಗೆಗೆ ಸುತ್ತಲೂ ಗಾಳಿಯಾಡುವಂತೆ ರಂಧ್ರ ಮಾಡಿ, ಪೆಟ್ಟಿಗೆಯನ್ನು ತಂದಾಯಿತು. ಬೆಳೆಯುವ ಹಕ್ಕಿಮರಿಗಳಿಗೆ ರಾಕ್ಷಸ ಹಸಿವಿರುತ್ತದೆ. ಎಷ್ಟೋ ಹೊತ್ತಿನಿಂದ ಅದು ಆಹಾರವಿಲ್ಲದೆ ಸೊರಗಿತ್ತು. ನನಗೆ ಕರೆ ಮಾಡಿದವರು ಅದಕ್ಕೆ ತಿನ್ನಲೆಂದು ಕಾಳುಕಡಿಗಳನ್ನು ಕೊಟ್ಟಿದ್ದರು. ಅದು ಕಾಳು ತಿಂದಿರಲಿಲ್ಲ. ನೀರು ಕುಡಿಸುವ ಅವರ ಪ್ರಯತ್ನವೂ ಸಫಲವಾಗಿರಲಿಲ್ಲ.